# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 569 |
| ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13/12/2024 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದಿಂದ ಅಂಗವಿಕಲರುಗಳಿಗೆ ವಸತಿ ಮತ್ತು ಕಲ್ಯಾಣ ಕೇಂದ್ರುಗಳನ್ನು ತೆರೆಯಲಾಗಿದೆಯೇ: ವಯಸ್ಸಾದ ನಿರ್ಗತಿಕ ಅಂಗವಿಕಲರುಗಳಿಗೆ ಬಿಕ್ಷುಕ ಕಾಲೋನಿಯ ರೀತಿಯಲ್ಲಿ ಅಂಗವಿಕಲರ ವಸತಿ ಕಲ್ಯಾಣ ಕೇಂದ್ರುಗಳನ್ನು ತೆರೆಯಲು ಸರ್ಕಾರ ಚಿಂತನೆ ನಡೆಸಿದೆಯೇ: (ಮಾಹಿತಿ ಒದಗಿಸುವುದು) | ಹೌದು<br><br>1. ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಡಿಯಲ್ಲಿ ನಿರ್ಗತಿಕ ಬುದ್ಧಿಮಾಂದ್ಯ ಪುರುಷ ಹಾಗೂ ಮಹಿಳೆಯರಿಗೆ ಸರ್ಕಾರದ ವತಿಯಿಂದ ಬೆಂಗಳೂರು ನಗರದಲ್ಲಿ 2 ಅನುಪಾಲನಾ ಗೃಹಗಳು ಹಾಗೂ ಹುಬ್ಬಳ್ಳಿಯಲ್ಲಿ 1 ಮಹಿಳಾ ಅಮುಪಾಲನಾ ಗೃಹಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಅನುಪಾಲನಾ ಗೃಹಗಳಲ್ಲಿ ಊಟ, ವಸತಿ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br>2. ಸ್ವಯಂ ಸೇವಾ ಸಂಸ್ಥೆಗಳ ಮೂಲಕ ರಾಜ್ಯ ಅನುದಾನದಡಿ ನಿರಾಶ್ರಿತ ಬುದ್ಧಿಮಾಂಯ ಪುರುಷರಿಗಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ನಿರಾಶ್ರಿತ ಬುದ್ಧಿಮಾಂದ್ಯ ಮಹಿಳೆಯರಿಗಾಗಿ ಮೈಸೂರು ನಗರದಲ್ಲಿ ತಲಾ ಒಂದರಂತೆ ಅನುಪಾಲನಾ ಗೃಹಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಅನುಪಾಲನಾ ಗೃಹಗಳಲ್ಲಿ ಊಟ ವಸತಿ ಹಾಗೂ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>ಮುಂದುವರೆದು, ಶೈಕ್ಷಣಿಕ ಪುನರ್ವಸತಿ ಕಲ್ಪಿಸಲು ಈ ಕೆಳಕಂಡಂತೆ ಯೋಜನೆಗಳನ್ನು ನಿರ್ವಹಿಸಲಾಗುತ್ತಿದೆ.<br><br>• ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ಬುದ್ಧಿಮಾಂದ್ಯ (ಸೆರೆಬ್ರಲ್ ಪಾಲ್ಸಿ, ಆಟಿಸಂ) ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 164 ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. |

| | | |
|---|---|---|
| | | • 1982ರ ರಾಜ್ಯ ಅನುದಾನ ಸಂಹಿತೆಯಡಿ ಬುದ್ಧಿಮಾಂದ್ಯ ಶ್ರವಣದೋಷ ಹಾಗೂ ದೃಷ್ಟಿದೋಷವುಳ್ಳ ಮಕ್ಕಳಿಗೆ ಒಟ್ಟು 33 ವಿಶೇಷ ಶಾಲೆ/ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ.<br>• ಇಲಾಖೆಯ ವತಿಯಿಂದ ವಿಕಲಚೇತನ ಮಹಿಳೆಯರು ಹಾಗೂ ಪುರುಷ ಉದ್ಯೋಗಸ್ಥ ನೌಕರರು ಮತ್ತು ತರಬೇತಿದಾರರಿಗೆ ಬೆಂಗಳೂರು ನಗರದಲ್ಲಿ ಎರಡು ವಸತಿನಿಲಯಗಳು ನಡೆಯುತ್ತಿವೆ.<br>• ಉದ್ಯೋಗಸ್ಥ ಅಂಗವಿಕಲ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರು/ತರಬೇತಿದಾರರಿಗೆ 22 ಜಿಲ್ಲೆಗಳಲ್ಲಿ 25 ವಸತಿನಿಲಯಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. |
| ಆ) | ರಾಜ್ಯದಲ್ಲಿ ವಯಸ್ಸಾದ ನಂತರ ಹಾರೈಕೆ ಮಾಡಲು ಯಾರು ಇಲ್ಲದ ಅಂಗವಿಕಲರುಗಳಿಗೆ ಪ್ರತ್ಯೇಕ ವಸತಿ ಕಲ್ಯಾಣ ಕೇಂದ್ರಗಳನ್ನು ತೆರೆದು ಅವರುಗಳಿಗೆ ಆಸರೆ ಒದಗಿಸಲು ಸರ್ಕಾರದ ಚಿಂತನೆಗಳೇನು? | 2024-25ನೇ ಸಾಲಿನ ಸನ್ಮಾನ್ಯ ಮುಖ್ಯ ಮಂತ್ರಿಗಳ ಆಯವ್ಯಯ ಭಾಷಣದ ಕಂಡಿಕೆ 153ರಲ್ಲಿ ಘೋಷಿಸಿರುವಂತೆ ಸರ್ಕಾರದ ಆದೇಶ ದಿನಾಂಕ:16.11.2024ರಲ್ಲಿ "2024-25ನೇ ಸಾಲಿನಲ್ಲಿ ನಿರಾಶ್ರಿತ ಬೌದ್ಧಿಕ ವಿಕಲಚೇತನರ ಆರೈಕೆ ಮತ್ತು ಸಂರಕ್ಷಣೆಗಾಗಿ 4 ಹೊಸ ಅನುಪಾಲನಾ ಗೃಹಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ". ಅದರಂತೆ ಇಲಾಖಾ ವತಿಯಿಂದ ಆಯ್ದ ಸ್ಥಳಗಳಲ್ಲಿ ಅನುಪಾಲನಾ ಗೃಹಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ:ಮಮಇ 289 ಪಿಹೆಚ್‌ಪಿ 2024**

**(ಲಕ್ಷ್ಮೀ. ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು